A.—**Sri Kadidal MANJAPPA** (Minister for Revenue and Public Works).—

	A.	g.
(*a*) Bangalore ...	44,445	18
Kolar ...	78,099	10
Tumkur ...	65,429	7
Mysore ...	29,254	16
Mandya ...	19,031	31
Hassan ...	10,432	19
Shimoga ...	25,092	33
Chikmagalur ...	14,866	14
Chitaldrug ...	49,347	19
Total ...	3,35,999	7

	A.	g.
(*b*) Bangalore ...	36,178	16
Kolar ...	62,780	36
Tumkur ...	47,149	1
Mysore ...	14,463	26
Mandya ...	17,244	33
Hassan ...	5,067	2
Shimoga ...	12,451	31
Chikmagalur ...	13,250	3
Chitaldrug ...	24,293	8
Total ...	2,32,878	36

(*c*) The lands are granted under this scheme as per terms contained in Government Orders No. R. 6550-93—L.R. 65-41-1, dated 11th April 1942 and No. R. 8361-71—R.M. 65-41-12, dated 30th June 1942.

(*d*) No separate portion was set apart for grant under this scheme.

(*e*) Does not arise in view of the reply to clause (*d*).

(*f*) Does not arise in view of the reply to clause (*d*).

(*g*) Grants are being cancelled in cases of violation of the terms of the grant

ಶ್ರೀ ಟಿ. ಜಿ. ತಿಮ್ಮೇಗೌಡರು.—ಸಾಗುವಳಿಯಾಗದೆ ಉಳಿದಿರುವ ಒಂದು ಲಕ್ಷ ಚಿಲ್ಲರೆ ಜಮೀನುಗಳು ಎಷ್ಟು ವರ್ಷಗಳಿಂದ ಬಂಜರುಬಿದ್ದಿವೆ ?

ಕಡಿದಾಳ್ ಮಂಜಪ್ಪನವರು.—ಇಷ್ಟು ವರ್ಷಗಳಿಂದ ಎಂದು ಕರಾರುವಾಕ್ಕಾಗಿ ಹೇಳುವುದಕ್ಕಾಗುವುದಿಲ್ಲ.

ಶ್ರೀ ಟಿ. ಜಿ. ತಿಮ್ಮೇಗೌಡರು.—ಬಂಜರು ಬಿದ್ದಿದೆಯೆಂದು ಒಪ್ಪುತೀರಾ ?

ಶ್ರೀ ಕಡಿದಾಳ್ ಮಂಜಪ್ಪನವರು.—ಬಂಜರು ಬಿದ್ದಿದೆಯೆಂದು ಹೇಳುವುದಕ್ಕಾಗುವುದಿಲ್ಲ; ಸಾಗುವಳಿಗೆ ತಂದಿಲ್ಲವೆಂದು ನಮಗೆ ಬಂದಿರುವ ವರದಿಯಿಂದ ಗೊತ್ತಾಗುತ್ತದೆ.

ಶ್ರೀ ಟಿ. ಜಿ. ತಿಮ್ಮೇಗೌಡರು.—ಹೀಗೆ ಸಾಗುವಳಿ ಮಾಡದೆ ಬಂಜರುಬಿಟ್ಟಿರುವುದರಿಂದ ಅದು ಮುಂಚೆ ಜಮೀನನ್ನು ಸಾಗುವಳಿಗೆ ಕೊಟ್ಟ ಷರತ್ತುಗಳನ್ನು ಉಲ್ಲಂಘಿಸಿದಂತಾಯಿತಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪನವರು.—ಹೌದು,

ಶ್ರೀ ಟಿ. ಜಿ. ತಿಮ್ಮೇಗೌಡರು.—ಹಾಗೆ ಷರತ್ತುಗಳ ಉಲ್ಲಂಘನೆ ಆದ ಸಂದರ್ಭದಲ್ಲಿ ಏನು ಮಾಡುತ್ತೀರಿ ?

ಶ್ರೀ ಕಡಿದಾಳ್ ಮಂಜಪ್ಪನವರು – ಗ್ರ್ಯಾಟನ್ನು ವಜಾಮಾಡುತ್ತೇವೆ.

ಶ್ರೀ ಟಿ. ಜಿ. ತಿಮ್ಮೇಗೌಡರು.—ಹೆಚ್ಚುವರಿ ಆಹಾರವನ್ನು ಬೆಳೆಯುವ ಉದ್ದೇಶದಿಂದ ಕೊಟ್ಟಿರತಕ್ಕ ಜಮೀನುಗಳನ್ನು ರೈತರು ಎರಡು ಮೂರು ವರ್ಷಗಳಲ್ಲಯೇ ಮಾರಿಕೊಂಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪನವರು.—ಬಂದಿಲ್ಲ.

Sri A. BHEEMAPPA NAIK (Molakalmuru).—What is the maximum period fixed for confirming the land given temporarily ?

Sri Kadidal MANJAPPA.—Five years.

Sri A. BHEEMAPPA NAIK.—In how many cases has that really been adhered to ?

Sri Kadidal MANJAPPA.—In a majority of the cases.

Sri A. BHEEMAPPA NAIK.—Has it come to the notice of the Government that even after 6 years, 8 years, in spite of continued applications, the grants are not confirmed finally to the raiyats ?

Sri Kadidal MANJAPPA.—In some cases.

Sri A. BHEEMAPPA NAIK.—Will the Government see that this anomaly is set right and immediate steps are taken to confirm these lands if they have been regularly cultivated ?

Sri Kadidal MANJAPPA.—Certainly.

Number of Officers and Officials in the Public Works Department.

Q.—454. **Sri Y. M. CHANDRASEKHARIAH** (Kadur).—

Will the Government be pleased to state :—

(*a*) the number of officers and officials in the Department of Public Works prior to 1947 ;

(*b*) out of them, the total amount of salary paid to the (1) Chief Engineer, (2) Superintending Engineers,

(3) Executive Engineers, (4) Assistant Engineers, (5) Surveyors, (6) Sub-Overseers, and (7) Work Inspectors;

(*c*) the number of (1) Divisions, (2) Circles, (3) Sub-Divisions, and (4) the number of hands that are increased after the reorganisation of this department and the increase in salaries;

(*d*) the total progress of work prior to 1947;

(*e*) the total progress of work in each year since then?

A.—**Sri Kadidal MANJAPPA.**—(Minister for Revenue and Public Works).—

(*a*) Officers ... 105.
Officials ... 1,357.

(*b*) The total amount of salaries paid is Rs. 11,42,585. The figures for individual cadre are not readily available and it takes a long time for collecting the figures from the different offices.

(*c*) Circles ... Nil.
Divisions ... Nil.
Sub-Divisions ... Nil.

The reorganisation has resulted in a savings of Rs. 2,04,093 per annum.

(*d*) Rs. 1,88,91,455 during the year 1946-47.

(*e*)—

		Rs.
1947-48	...	1,84,97,714.
1948-49	...	2,73,37,503.
1949-50	...	2,30,70,275 (9 months).
1950-51	...	3,48,34,533.
1951-52	...	Final figures are not yet available.

ಶ್ರೀ ವೈ. ಎಂ. ಚಂದ್ರಶೇಖರಯ್ಯನವರು.—ಇಂಜಿನಿಯರಿಂಗ್ ಇಲಾಖೆಯಲ್ಲಿ 1,357 ಜನ ನೌಕರರಿದ್ದಾರೆಂದು ಹೇಳಿದ್ದೀರಿ ಇವರ ಪೈಕಿ ರಸ್ತೆಯಲ್ಲಿ ಕಲ್ಲು ಅರಿಸುವವರೂ ಸೇರಿದ್ದಾರೆಯೇ?

ಶ್ರೀ ಕಡಿದಾಳ್ ಮಂಜಪ್ಪನವರು.—ರಸ್ತೆಯಲ್ಲಿ ಕಲ್ಲು ಅರಿಸುವವರೂ ನೌಕರರಾಗಿದ್ದಾರೆ; ಅವರೂ ಇಲ್ಲಿ ಸೇರುತ್ತಾರೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯನವರು.—ರಸ್ತೆಯಲ್ಲಿ ಕೆಲಸ ಮಾಡುವ ಕೂಲಿಗಳು ಸೇರುವುದಿಲ್ಲವೇ!

ಶ್ರೀ ಕಡಿದಾಳ್ ಮಂಜಪ್ಪನವರು.—ಕೂಲಿಗಳು ನೌಕರರಲ್ಲ.

ಶ್ರೀ ವೈ. ಎಂ. ಚಂದ್ರಶೇಖರಯ್ಯನವರು.—ಎಲೆಕ್ಟ್ರಿಕ್ ಡಿಪಾರ್ಟ್‌ಮೆಂಟಿನ ಓವರಿಸಿಯರ್‌ಗಳು, ಸಬ್ ಓವರ್ಸಿಯರುಗಳು, ಪಂಚಾಯತಿಗಳ ಸಬ್ ಓವರ್ಸಿಯರ್‌ಗಳು, ಜಿಲ್ಲಾಬೋರ್ಡ್ ಓವರ್ಸಿಯರ್‌ಗಳೂ ಇದರಲ್ಲಿ ಸೇರಿದ್ದಾರೆಯೇ?

ಶ್ರೀ ಕಡಿದಾಳ್ ಮಂಜಪ್ಪನವರು.—ಪಬ್ಲಿಕ್ ವರ್ಕ್ಸ್ ಇಲಾಖೆಯ ಓವರ್ಸಿಯರ್, ಸಬ್ ಓವರ್ಸಿಯರ್‌ಗಳೆಲ್ಲರೂ ಸೇರಿದ್ದಾರೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯನವರು,—ಎಲೆಕ್ಟ್ರಿಕ್ ಡಿಪಾರ್ಟ್‌ಮೆಂಟಿನ ಓವರ್ಸಿಯರುಗಳು ಸೇರಿದ್ದಾರೆಯೇ?

ಶ್ರೀ ಕಡಿದಾಳ್ ಮಂಜಪ್ಪನವರು.—ಎಲೆಕ್ಟ್ರಿಕಲ್ ಡಿಪಾರ್ಟ್‌ಮೆಂಟ್‌ನವರೇ ಬೇರೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯನವರು.—ಶಿವಮೊಗ್ಗ ಸಬ್ ಡಿವಿಜ಼ನಲ್ಲಿ ಕೇವಲ 80,000 ರೂಪಾಯಿಗಳ ಕೆಲಸ ನಡೆದು ಬಾಕಿ ಹಣವೆಲ್ಲಾ ಲ್ಯಾಪ್ಸ್ ಆಗುವುದಕ್ಕೆ ಬಿಟ್ಟಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪನವರು.—ಆಗಿರಬಹುದು. ನಮ್ಮ ಗಮನಕ್ಕೆ ಬಂದಿಲ್ಲ.

ಶ್ರೀ ವೈ. ಎಂ. ಚಂದ್ರಶೇಖರಯ್ಯನವರು.—ಸಂಬಳ ಕ್ಯಾಗಿಯೇ 11ಲಕ್ಷ ಚಿಲ್ಲರೆ ರೂಪಾಯಿಗಳನ್ನು ಕೊಟ್ಟು ನೌಕರರ ಸಂಖ್ಯೆಯನ್ನು ಜಾಸ್ತಿಮಾಡಿ ಕೇವಲ 80,000 ರೂಪಾಯಿಗಳ ಕೆಲಸಮಾಡಿದ್ದಾರೆಂದರೆ, ಆ ಸಬ್ ಓವರ್ಸಿಯರ್‌ಗಳಿಗೆಲ್ಲಾ ಬರೀ ಪುಕಸಟ್ಟೆ ಸಂಬಳ ಕೊಟ್ಟಂತಾಗಿದೆಯೆಂದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪನವರು.—ಬಂದಿಲ್ಲ.

ಶ್ರೀ ವೈ. ಎಂ. ಚಂದ್ರಶೇಖರಯ್ಯನವರು.—ಇಂಜಿನಿಯರಿಂಗ್ ಇಲಾಖೆಯಲ್ಲಿ ನೌಕರರು ಜಾಸ್ತಿಯಾಗಿಲ್ಲವೆಂದು ಹೇಳಿದ್ದೀರಿ. ಡಿವಿಜ಼ನ್‌ಗಳು ಜಾಸ್ತಿಯಾಗಿಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪನವರು.—ಡಿವಿಜ಼ನ್‌ಗಳು ಮೊದಲು ಎಷ್ಟಿದ್ದುವೋ ಈಗಲೂ ಅಷ್ಟೇ ಇವೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯನವರು.—1947ರಿಂದೀಚೆಗೆ ಎಲೆಕ್ಟ್ರಿಕಲ್ ಡಿವಿಜ಼ನ್‌ಗಳು ಜಾಸ್ತಿಯಾಗಿಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪನವರು.—ಎಲೆಕ್ಟ್ರಿಕಲ್ ಇಲಾಖೆಯಲ್ಲಿ ಜಾಸ್ತಿಯಾಗಿರಬಹುದು. P. W. D. ಇಲಾಖೆಯಲ್ಲಿ ಜಾಸ್ತಿಯಾಗಿಲ್ಲ.

ಶ್ರೀ ವೈ. ಎಂ. ಚಂದ್ರಶೇಖರಯ್ಯನವರು.—ತಾಲ್ಲೂಕು ಸಬ್ ಡಿವಿಜ಼ನ್‌ಗಳೂ ಕೂಡ 1947ರಿಂದೀಚೆಗೆ ಜಾಸ್ತಿಯಾಗಿಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪನವರು.—ಇಲ್ಲ.

ಶ್ರೀ ವೈ. ಎಂ. ಚಂದ್ರಶೇಖರಯ್ಯನವರು.—1947ರಲ್ಲಿ, 188 ಲಕ್ಷ ರೂಪಾಯಿಗಳ ಕೆಲಸ ನಡೆದಿದೆಯೆಂದೂ, 1950-51ರಲ್ಲಿ 3 ಕೋಟಿ ಚಿಲ್ಲರೆ ರೂಪಾಯಿಗಳ ಕೆಲಸ ನಡೆದಿದೆಯೆಂದೂ ಹೇಳಿದ್ದೀರಿ. ಈ ಹಣದಲ್ಲಿ ಲಕ್ಕವಳ್ಳಿ ಪ್ರಾಜೆಕ್ಟು ಮತ್ತು ಬಾಕಿ ಪ್ರಾಜೆಕ್ಟುಗಳ ದುಡ್ಡು ಸೇರಿದೆಯೇ?

ಶ್ರೀ ಕಡಿದಾಳ್ ಮಂಜಪ್ಪನವರು.—ನೋಟೀಸ್ ಬೇಕು.

ಶ್ರೀ ವೈ. ಎಂ. ಚಂದ್ರಶೇಖರಯ್ಯನವರು.—ಆಗ ರೇಟು ರೂ 1—4—0 ಇದ್ದು ಈಗ 12 ಆಣೆ ಜಾಸ್ತಿಯಾಗಿರುವುದರಿಂದ ಹೀಗೆ ಹಣ ಜಾಸ್ತಿಯಾಗಿದೆಯೆಂಬುದು ಗೊತ್ತಿದೆಯೇ?

ಶ್ರೀ ಕಡಿದಾಳ್ ಮಂಜಪ್ಪನವರು.—ಗೊತ್ತಿದೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯನವರು.—ಈ ಇಲಾಖೆಯಲ್ಲಿ ನೌಕರರ ಸಂಖ್ಯೆ ಬಹಳ ಜಾಸ್ತಿಯಾಗಿ ನೌಕರರಿಗೆ ಕೆಲಸ ಕಡಮೆಯಾಗಿದೆಯೆಂದರೆ ಒಪ್ಪುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪನವರು.—ಕೆಲಸ ಜಾಸ್ತಿ ಯಾಗಿರುವುದರಿಂದ ನೌಕರರುಗಳೂ ಜಾಸ್ತಿಯಾಗಿ ದ್ದಾರೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡರು (ಕುಣಿಗಲು).—ಈ ಇಲಾಖೆಯ ರಿ–ಆರ್ಗನೈಸೇಷನ್‌ನಿಂದ ಕೆಲಸಗಾರರ ಓವರ್‌ಸಿಯರ್‌ಗಳ ಸಂಖ್ಯೆ ಜಾಸ್ತಿಯಾಗಿದೆಯೇ ಇಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪನವರು.—ರಿ–ಆರ್ಗನೈಸೇಷನ್ ದೆಸೆಯಿಂದ ವರ್ಷಕ್ಕೆ 2 ಲಕ್ಷ 4 ಸಾವಿರದ 98 ರೂಪಾಯಿಗಳ ಲಾಭವಾಗಿದೆ.

ಶ್ರೀ ಕೆ. ವಿ. ಶಂಕರಗೌಡರು (ಮಂಡ್ಯ).—ಒಟ್ಟು ಎಷ್ಟು ಡಿವಿಜ಼ನ್‌ಗಳಿವೆ :

ಶ್ರೀ ಕಡಿದಾಳ್ ಮಂಜಪ್ಪನವರು.—ನೋಡಿ ಹೇಳ ಬಹುದು. It is a big list Sir. If the Hon'ble Member wants, I will lay it on the table.

ಶ್ರೀ ಕೆ. ವಿ. ಶಂಕರಗೌಡರು.—ಒಟ್ಟು ಸಂಖ್ಯೆ ಎಷ್ಟು? I do not want the list; I want only the number.

Sri Kadidal MANJAPPA.—I will have to count here. It is not arranged according to serial number.

ಶ್ರೀ ಕೆ. ವಿ. ಶಂಕರಗೌಡರು.—ಒಂದು ಡಿವಿಜನ್ನು ಕೆಲಸಮಾಡಿ ಒಂದು ವರ್ಷಕ್ಕೆ ಖರ್ಚುಮಾಡಬಹುದಾದ ಮೊಬಲಗೆಷ್ಟು ?

ಶ್ರೀ ಕಡಿದಾಳ್ ಮಂಜಪ್ಪನವರು.—ಅದನ್ನು ಹೇಳು ವುದಕ್ಕಾಗುವುದಿಲ್ಲ.

ಶ್ರೀ ಕೆ. ವಿ. ಶಂಕರಗೌಡರು.—ಒಂದು ಡಿವಿಜನ್ನಿನ ನಲ್ಲಿ ವರ್ಷಕ್ಕೆ ಇಷ್ಟು ಕೆಲಸ ಆಗಬೇಕೆಂದು ಸರ್ಕಾರದ ದಲ್ಲಿ ನಿಗಧಿಯಾಗಿ ಲೆಕ್ಕ ಇಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪನವರು.—ಅದಷ್ಟು ಹೆಚ್ಚು ಕೆಲಸ ಆಗಬೇಕೆಂಬುದು ಸರ್ಕಾರದ ಉದ್ದೇಶ.

ಶ್ರೀ ಕೆ. ವಿ. ಶಂಕರಗೌಡರು.—1950–51ರಲ್ಲಿ ಒಟ್ಟು ಮೂರುಕೋಟಿ ಚಿಲ್ಲರೆ ರೂಪಾಯಿಗಳು ಖರ್ಚಾ ಗಿದೆ ಎಂದು ತಿಳಿಸಿದೆ. ಒಂದು ಡಿವಿಜ಼ನ್ ಇರಬೇಕಾದರೆ ಇಷ್ಟು ಹಣ ಖರ್ಚಾಗಬೇಕೆಂದು ನಿಯಮವೇನೂ ಇಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪನವರು.—ಇದೆ.

ಶ್ರೀ ಕೆ. ವಿ. ಶಂಕರಗೌಡರು.—ಎಷ್ಟು ಖರ್ಚು ಮಾಡಬೇಕೋ ಅಷ್ಟನ್ನು ಖರ್ಚುಮಾಡಿದ್ದಾರೆಯೆ ?

ಶ್ರೀ ಕಡಿದಾಳ್ ಮಂಜಪ್ಪನವರು.—ಅನೇಕ ನಂದ ರ್ಭಗಳಲ್ಲಿ ಮಾಡಿದ್ದಾರೆ.

ಶ್ರೀ ಬಿ. ಎಂ. ಸೀನಪ್ಪನವರು (ಕಬ್ಬಿಹೇಟ್ಟೆ).—ಬೆಂಗಳೂರು ಬಿಲ್ಡಿಂಗ್ಸ್ ಡಿವಿಜನ್ನಿನಲ್ಲಿ 5 ಸಬ್‌ಡಿವಿ ಜ಼ನ್‌ಗಳಿವೆಯೆಂಬುದು ಸರ್ಕಾರದವರಿಗೆ ಗೊತ್ತಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪನವರು.—ನಾಲ್ಕು ಸಬ್ ಡಿವಿಜ಼ನ್‌ಗಳಿವೆ.

ಶ್ರೀ ಬಿ. ಎಂ. ಸೀನಪ್ಪನವರು.—ಈ ನಾಲ್ಕು ಸಬ್ ಡಿವಿಜ಼ನ್‌ಗಳಲ್ಲಿ ತಕ್ಕಷ್ಟು ಕೆಲಸವಿಲ್ಲದೆ, ಅನೇಕ ಕೆಲಸ ಗಾರರು ಸುಮ್ಮನೆ ಕುಳಿತಿರುವುದು ಗಮನಕ್ಕೆ ಬಂದಿ ದೆಯೇ ?

ಶ್ರೀ ಕಡಿದಾಳ್ ಮಂಜಪ್ಪನವರು.—ಸಾಕಷ್ಟು ಕೆಲಸವಿದೆ, ಮಾಡುತ್ತಿದ್ದಾರೆಂದು ಸರ್ಕಾರದ ಗಮನಕ್ಕೆ ಬಂದಿದೆ.

ಶ್ರೀ ಕೆ. ಪ್ರಭಾಕರ್ ಅವರು (ನೆಲಮಂಗಲ–ಅನುಸೂಚಿತ ಜಾತಿಗಳು).—ಇಂಜಿನಿಯರಿಂಗ್ ಇಲಾಖೆಯಲ್ಲಿ approved estimate ನಂತೆ ಕೆಲಸ ಮುಗಿದ ಮೇಲೆ, ಆ ಹಣ ಸರಿಯಾಗಿ ಖರ್ಚಾಗಿದೆಯೇ ಇಲ್ಲವೇ ಎಂಬುದನ್ನು ನೋಡಲು ಆಡಿಟ್‌ಗೆ ವಶಪಡಿಸಿದ್ದೀರಾ ?

ಶ್ರೀ ಕಡಿದಾಳ್ ಮಂಜಪ್ಪನವರು.—ಅದು ಆಡಿಟ್ ಆಗುವುದಿಲ್ಲ, ಸೂಪರ್‌ವಿಷ್ಟ್ ನಡೆಯುತ್ತದೆ.

ಶ್ರೀ ವಿ. ಮಸಿಯಪ್ಪನವರು (ಹಿರಿಯೂರು).—ಬ್ಯಾಡರಹಳ್ಳಿಯ ಹತ್ತಿರ ಒಂದು ಸೇತುವೆ ನಿರ್ಮಾಣ ಮಾಡುವುದಕ್ಕೆ ಒಂದು ಸಬ್‌ಡಿವಿಜ಼ನ್ ಇದೆಯೆ ?

ಶ್ರೀ ಕಡಿದಾಳ್ ಮಂಜಪ್ಪನವರು.—ಇದೆ.

ಶ್ರೀ ವಿ. ಮಸಿಯಪ್ಪನವರು.—ಒಂದೂವರೆ ವರ್ಷ ದಿಂದ ಅಲ್ಲಿ ಏನೂ ಕೆಲಸವಿಲ್ಲವೆಂದು ವರದಿಯೇನಾದರೂ ಬಂದಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪನವರು.—ನೋಟೀಸ್.

ಶ್ರೀ ವಿ. ಮಸಿಯಪ್ಪನವರು.—ಅಲ್ಲ ಕ್ರಮವಾಗಿ ಏನು ಕೆಲಸವೂ ನಡೆಯುತ್ತಿಲ್ಲವೆಂಬುದು ತಮ್ಮ ಗಮನಕ್ಕೆ ಬಂದರೆ ಕೆಲಸ ನಡೆಸಲು ಸೂಕ್ತ ಏರ್ಪಾಡು ಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪನವರು.—ಖಂಡಿತವಾ ಗಿಯೂ ಪರಿಶೀಲನೆಮಾಡುತ್ತೇವೆ.

ಶ್ರೀ ಜಿ. ಶಿವಪ್ಪನವರು (ಹೊಳಲ್ಕೆರೆ).—ಸೆಕ್ಷನ್ ಆಫೀಸರುಗಳ ಕೆಲಸವೇನು ?

Sri Kadidal MANJAPPA.—That does not arise.

Mr. SPEAKER.—Any other supplementary question ?

Sri G. SIVAPPA.—What is the difference between a section officer and a supervisor ?

Mr. SPEAKER.—The Hon'ble Minister need not answer. The Member is entering into too many details.

ಶ್ರೀ ಮುಲ್ಕಾ ಗೋವಿಂದರೆಡ್ಡಿಯವರು (ಚಿತ್ರದುರ್ಗ).—ಮೊದಲು ರೋಡ್ಸ್ ಅಂಡ್ ಬಿಲ್ಡಿಂಗ್ಸ್ ಮತ್ತು ಇರಿಗೇಷನ್ ಎರಡಕ್ಕೂ ಒಬ್ಬರೇ ಚೀಫ್ ಇಂಜ ನಿಯರಿದ್ದರೆ ?

ಶ್ರೀ ಕಡಿದಾಳ್ ಮಂಜಪ್ಪನವರು.—ಬೇರೆ ಬೇರೆ, ಇರಿಗೇಷನ್‌ಗೆ ಒಬ್ಬರು ರೋಡ್ಸ್ ಅಂಡ್ ಬಿಲ್ಡಿಂಗ್ಸ್‌ಗೆ ಒಬ್ಬರು ಇದ್ದರು.

ಶ್ರೀ ಮುಲ್ಕಾ ಗೋವಿಂದರೆಡ್ಡಿಯವರು—ಅದಕ್ಕಿಂತ ಮುಂಚೆ, ಬಹಳ ಹಿಂದೆ ?

ಶ್ರೀ ಕಡಿದಾಳ್ ಮಂಜಪ್ಪನವರು.—ನಮಗೆ ಗೊತ್ತಿ ರುವ ಹಾಗೆ ಇರಿಗೇಷನ್ ಮತ್ತು ರೋಡ್ಸ್ ಅಂಡ್ ಬಿಲ್ಡಿಂಗ್ಸ್‌ಗಳಿಗೆ ಬೇರೆ ಬೇರೆ ಇದ್ದಾರೆ.

ಶ್ರೀ ಮುಲ್ಕಾ ಗೋವಿಂದರೆಡ್ಡಿಯವರು.—ಈಗ ಒಬ್ಬರು ನಿವೃತ್ತಿಯಾಗಿದ್ದಾರಲ್ಲವೆ ?

Mr. SPEAKER.—That does not arise. Any other supplementary ?

ಶ್ರೀ ಮುಲ್ಕಾ ಗೋವಿಂದರೆಡ್ಡಿಯವರು.—ಮಿತವ್ಯಯದ ದೃಷ್ಟಿಯಿಂದ ಒಂದು ಪೋಸ್ಟ್ ವಜಾ ಮಾಡು ವುದು ಸೂಕ್ತವಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪನವರು.—ಈ ಸಲಹೆಯನ್ನು ಪರಿಶೀಲನೆ ಮಾಡುತ್ತೇವೆ.

ಶ್ರೀ ಎಸ್. ಎಂ. ಮರಿಯಪ್ಪನವರು (ಪಿರಿಯಾಪಟ್ಟಣ).—ಪಬ್ಲಿಕ್‌ವರ್ಕ್ಸ್ ಇಲಾಖೆಯ ಕೆಲವು ಕೆಲಸಗಳಲ್ಲಿ ಕೆಲವನ್ನು ಡಿಸ್ಟ್ರಿಕ್ಟ್ ಬೋರ್ಡಿಗೆ ವರ್ಗಮಾಡಿಲ್ಲವೆ ?

Sri Kadidal MANJAPPA.—That does not arise out of this question.

Promotion of maistries as Sub-overseers in the P. W. D.

Q.—458. **Sri Y. M. CHANDRASEKHARIAH** (Kadur).—

Will the Government be pleased to state :—

(*a*) the number of Sub-Overseers in Public Works Department who have been promoted from the rank of maistries and who have not passed any Mechanical and Electrical Engineering tests and who do not possess any educational qualifications ;

(*b*) whether they have been authorised to record entries in the Measurement Books ;

(*c*) whether these persons possess any knowledge of Civil Engineering ?

A.—**Sri Kadidal MANJAPPA** (Minister for Revenue and Public Works).—

(*a*) Sub-Overseers are appointed by direct recruitment and not promoted from the rank of maistries.

(*b*) and (*c*) Do not arise in view of reply to (*a*) above.

ಶ್ರೀ ವೈ. ಎಂ. ಚಂದ್ರಶೇಖರಯ್ಯನವರು.—ಪರೀಕ್ಷೆ ಪಾಸುಮಾಡಿರುವವರೇ ಇದ್ದಾರೆ ಎಂದು ಉತ್ತರದಲ್ಲಿ ಹೇಳಿದ್ದೀರಿ. ಇವರಲ್ಲಿ 'ಸುಕ್ಕೂರ್' ಪರೀಕ್ಷೆ ಮಾಡಿರುವವರೂ ಇದ್ದಾರೆಯೆ ?

ಶ್ರೀ ಕಡಿದಾಳ್ ಮಂಜಪ್ಪನವರು.— ಸುಕ್ಕೂರ್ ಪರೀಕ್ಷೆ ಎಂದರೇನು ? ಕನ್ನಡಕ್ಕೆ ತರ್ಜುಮೆಯಾದ ಉತ್ತರದಲ್ಲಿ ಮುದ್ರಣದ ತಪ್ಪಿರಬಹುದು. ಮೇಸ್ತ್ರಿಗಳಿಗೆ ಸಬ್ ಓವರ್‌ಸಿಯರ್ ಆಗಿ ಪ್ರಮೋಷನ್ ಕೊಡುವುದಿಲ್ಲ. ಅವರಿಗೆ ಅರ್ಹತೆಯಿದ್ದರೆ ವರ್ಕ್ಸ್ ಇನ್‌ಸ್ಪೆಕ್ಟರುಗಳಾಗಿ ನೇಮಿಸುತ್ತಾರೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯನವರು.—ಬೆಂಗಳೂರಿನಲ್ಲೋ ತಮ್ಮೂರಿನಲ್ಲೋ ಮನೆಯಲ್ಲೇ ಇದ್ದುಕೊಂಡು ಪೋಸ್ಟಿನ ಮೂಲಕ ಪರೀಕ್ಷೆ ಮಾಡಿರುವವರು, ಎಂದರೆ, ಸುಕ್ಕೂರ್ ಪರೀಕ್ಷೆ ಮಾಡಿರುವವರಲ್ಲವೆ!

ಶ್ರೀ ಕಡಿದಾಳ್ ಮಂಜಪ್ಪನವರು.— ಸುಕ್ಕೂರ್ ಪರೀಕ್ಷೆ ಎಂದರೆ ನನಗೆ ಅರ್ಥವಾಗಿಲ್ಲ. ಬೆಂಗಳೂರಿನ ಇಂಜಿನಿಯರಿಂಗ್ ಸ್ಕೂಲಿನಲ್ಲಿ ಮೂರುವರ್ಷ ಶಿಕ್ಷಣ ಪಡೆದು ಆ ಮೇಲೆ ಪರೀಕ್ಷೆಯಲ್ಲಿ ಉತ್ತೀರ್ಣರಾದಮೇಲೆ ಅಂಥವರನ್ನು ನೇಮಿಸುವುದು.

ಶ್ರೀ ವೈ. ಎಂ. ಚಂದ್ರಶೇಖರಯ್ಯನವರು.—ಶಿಕ್ಷಣ ಪಡೆಯುವುದು ಅಲ್ಲೊ ; ಇಲ್ಲೊ ?

ಶ್ರೀ ಕಡಿದಾಳ್ ಮಂಜಪ್ಪನವರು.— ಇಂಜಿನಿಯರಿಂಗ್ ಸ್ಕೂಲಿನಲ್ಲಿ.

ಶ್ರೀ ವೈ. ಎಂ. ಚಂದ್ರಶೇಖರಯ್ಯನವರು.—ತಮ್ಮ ತಮ್ಮ ಊರಿನಲ್ಲಿ ಕುಳಿತುಕೊಂಡು ಕಾಗದದ ಮುಖೇನ ಪರೀಕ್ಷೆ ಪಾಸು ಮಾಡಿದವರಿಲ್ಲವೆ!

ಶ್ರೀ ಕಡಿದಾಳ್ ಮಂಜಪ್ಪನವರು.—ಊರಿನಲ್ಲಿ ಕುಳಿತು ಓದಿದವರನ್ನು ನೇಮಿಸುವ ಹಾಗಿಲ್ಲ.

ಶ್ರೀ ವೈ. ಎಂ. ಚಂದ್ರಶೇಖರಯ್ಯನವರು.—ಅಂಥವರು ಸಬ್ ಓವರ್‌ಸಿಯರಾಗಿ ಈ ಇಲಾಖೆಯಲ್ಲಿಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪನವರು.—ಇಲ್ಲ.

ಶ್ರೀ ವೈ. ಎಂ. ಚಂದ್ರಶೇಖರಯ್ಯನವರು.—ಕಡೂರು ಚಿಕ್ಕಮಗಳೂರಿನಲ್ಲಿ ಇಂಥವರಿಲ್ಲವೆ?

ಶ್ರೀ ಕಡಿದಾಳ್ ಮಂಜಪ್ಪನವರು.—ವರ್ಕ್ ಇನ್‌ಸ್ಪೆಕ್ಟರಾಗಿರಬಹುದು.

ಶ್ರೀ ವೈ. ಎಂ. ಚಂದ್ರಶೇಖರಯ್ಯನವರು.—ಅವರು ಸರಿಯಾಗಿ ಅಳತೆ ಮಾಡುವುದಿಲ್ಲ, ಪುಸ್ತಕದಲ್ಲಿ ನಮೂದುಮಾಡುವುದಿಲ್ಲವೆಂಬುದು ಗೊತ್ತಿದೆಯೆ?

ಶ್ರೀ ಕಡಿದಾಳ್ ಮಂಜಪ್ಪನವರು.—ಅವರು ಲೆಕ್ಕ ಇಡಬೇಕಾಗಿಯೂ ಇಲ್ಲ, ಅಳತೆಯನ್ನೂ ಮಾಡಬೇಕಾಗಿಲ್ಲ.

ಶ್ರೀ ವೈ. ಎಂ ಚಂದ್ರಶೇಖರಯ್ಯನವರು.—ನಮ್ಮ ತಾಲ್ಲೂಕಿನಲ್ಲಿ ಇಬ್ಬರು ಇದ್ದಾರೆ, ಅವರು ಎಲ್ಲವನ್ನೂ ಮಾಡುತ್ತಾರೆಂಬುದು ತಮ್ಮ ಗಮನಕ್ಕೆ ಬಂದಿದೆಯೆ?

ಶ್ರೀ ಕಡಿದಾಳ್ ಮಂಜಪ್ಪನವರು.—ಅವರನ್ನು ಸಬ್ ಓವರ್‌ಸಿಯರಾಗಿ ನೇಮಕ ಮಾಡಿಕೊಂಡಿರಬೇಕು.

ಶ್ರೀ ವೈ. ಎಂ. ಚಂದ್ರಶೇಖರಯ್ಯನವರು.—ಇವರು ಸರಿಯಾಗಿ ಕೆಲಸ ಮಾಡುವುದಿಲ್ಲವೆಂಬುದು ತಮ್ಮ ಗಮನಕ್ಕೆ ಬಂದಿದೆಯೆ?

ಶ್ರೀ ಕಡಿದಾಳ್ ಮಂಜಪ್ಪನವರು.— ಬಂದಿದ್ದರೆ ಇದುವರೆಗೆ ಅವರನ್ನು ಕೆಲಸದಲ್ಲಿ ಇಟ್ಟುಕೊಳ್ಳುತ್ತಿರಲಿಲ್ಲ.

ಶ್ರೀ ವೈ. ಎಂ. ಚಂದ್ರಶೇಖರಯ್ಯನವರು.—ಈಗ ಅಲ್ಲಿ ಎರಡು ಡಿವಿಜ಼ನ್‌ಗಳಿಗೆ ಕೆಲಸ ಜಾಸ್ತಿ ಇಲ್ಲ, ಬಹಳ ಕಡಮೆಯೆಂದು ಒಪ್ಪುತ್ತೀರಾ?

Sri Kadidal MANJAPPA—That question does not arise.

Delay in Sanctioning loans to raiyats.

Q.—483. **Sri U. M. MADAPPA** (Chamarajanagar).—

Will the Government be pleased to state.—

Whether it has not come to their notice that the raiyats are put to great inconvenience as the takkavi loans, short-term loans, long-term loans and mortgage bank loans applied for by them are not being sanctioned to them in time?